**<u>ದಿನಾಂಕ 06.08.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು .</u>**

**<u>ಮುಖ್ಯ ವಿಚಾರಣೆಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.</u>**

ನನ್ನ ಮುಖ್ಯ ವಿಚಾರಣಾ ಸಾಕ್ಷವನ್ನು ಪ್ರಮಾಣ ಪತ್ರದ ರೂಪದಲ್ಲಿ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಯಿಸಿ ರುಜು ಮಾಡಿದ್ದು ಅದರಲ್ಲಿರುವ ವಿಚಾರಗಳು ಸತ್ಯವಾಗಿವೆ .

ಅಧಿಕಾರ ಪತ್ರವನ್ನು **ನಿ.ಆರ್ 1** ಎಂದು, ಪಾಲಿಸಿಯ ಪ್ರತಿಯನ್ನು **ನಿ.ಆರ್ 2** ಎಂದು, 1ನೇ ಎದುರುದಾರರಿಗೆ ನೀಡಿರುವ ನೋಟೀಸಿನ ಪ್ರತಿಯನ್ನು **ನಿ.ಆರ್ 3** ಎಂದು, ಅಂಚೆ ಇಲಾಖೆಯ ವೆಬ್ ಸೈಟ್ ನ ದಾಖಲಾತಿಯನ್ನು **ನಿ.ಆರ್ 4** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.</u>**

ನಾನು ಎರಡು ವರ್ಷಗಳಿಂದ 2ನೇ ಎದುರುದಾರರ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಆಪಾದಿತ ವಾಹನಕ್ಕೆ ನಮ್ಮ ಕಂಪನಿಯಿಂದ ವಿಮೆ ನೀಡಲಾಗಿರುತ್ತದೆ. ಆಪಾದಿತ ಲಾರಿ ಬಸ್ಸಿ ಗೆ ಡಿಕ್ಕಿಪಡಿಸಿರುತ್ತದೆ ಎಂದರೆ ಸಾಕ್ಷಿಯು ಪೊಲೀಸ್ ದಾಖಲಾತಿಗಳ ರೀತ್ಯ ಸರಿ ಎಂದು ನುಡಿಯುತ್ತಾರೆ. ಬಸ್ಸಿ ನ ಚಾಲಕ ಆಪಾದಿತ ಲಾರಿಯ ಚಾಲಕನ ವಿರುದ್ದ ದೂರು ದಾಖಲಿಸಿರುತ್ತಾರೆ ಎಂದರೆ ಸರಿ. ಅಪಘಾತವನ್ನು ನಾವು ಅಲ್ಲಗಳೆಯುತ್ತಿಲ್ಲ. ಆಪಾದಿತಿ ಲಾರಿಯನ್ನು ಫರೂಕ್ ಚಾಲನೆ ಮಾಡುತ್ತಿದ್ದನು ಎಂದರೆ ಸರಿ. ದೂರಿನಲ್ಲಿ ಆಪಾದಿತ ಲಾರಿಯನ್ನು ಫರೂಕ್ ಚಾಲನೆ ಮಾಡುತ್ತಿದ್ದ ಬಗ್ಗೆ ನಮೂದು ಇದೆ ಎಂದರೆ ಸರಿ. ಪೊಲೀಸರು ಫರೂಕ್ ರವರ ವಿರುದ್ದ ಅಂತಿಮ ವರದಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಫರೂಕ್ ರವರು ಆಪಾದಿತ ಲಾರಿ ಚಾಲನೆ ಮಾಡುವಾಗ ಅಪಘಾತವಾಗಿದ್ದು, ಆತನಿಗೆ

ಗಾಯಗಳು ಆಗಿರುತ್ತವೆ ಎಂದರೆ ದಾಖಲಾತಿಗಳ ರೀತ್ಯ ಹೌದು. ಅರ್ಜಿದಾರರು 1ನೇ ಎದುರುದಾರರ ಬಳಿ ನೌಕರನಾಗಿದ್ದ ಸಂದರ್ಭದಲ್ಲಿ ನೌಕರಿಗೆ ಸಂಬಂಧಪಟ್ಟಂತೆ ಕೆಲಸ ಮಾಡುವಾಗ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ.

ನಾವು ನೀಡಿದ ನೋಟೀಸು 1ನೇ ಎದುರುದಾರರಿಗೆ ಜಾರಿಯಾದ ಬಗ್ಗೆ ಮಾಹಿತಿ ಇಲ್ಲ. ಪರಿಹಾರ ಪಾವತಿಸುವ ಜವಾಬ್ದಾರಿಯಿಂದ ತಪ್ಪಿ ಸಿಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**1ನೇ ಎಸ್‌ಸಿಜೆ ಮತ್ತು ಎಸಿಜೆಎಮ್**

**ಬೆಂಗಳೂರು**